ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ

ಶ್ರೀರಂಗಪಟ್ಟಣ

ಸಿಸಿ 22/2019 ಸಿಡಬ್ಲೂ: 10 ಪಿ ಡಬ್ಲೂ:3

| | |
|---|---|
| ಹೆಸರು | ದಿನೇಶ್ ಎಸ್. |
| ತಂದೆಯ ಹೆಸರು | ಶಿವಪ್ಪ |
| ವಯಸ್ಸು | 49 ವರ್ಷ |
| ವೃತ್ತಿ | ವ್ಯವಸಾಯ |
| ವಾಸ | ನಗುವನಹಳ್ಳಿ |

ದಿನಾಂಕಃ 09.09.2024 ರಂದು ಸಾಕ್ಷಿಗೆ ಪ್ರಮಾಣ ವಚನ ನೀಡಲಾಯಿತು.

ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ

1. ಚಾಸಾ 11 ರವರ ಪರಿಯವಿದೆ. ಆರೋಪಿಯ ಪರಿಚಯವಿಲ್ಲ.
2. ಸುಮಾರು 4-5 ವರ್ಷಗಳ ಹಿಂದೆ ನಾನು ಪೊಲೀಸ್ ಠಾಣೆಗೆ ನನ್ನ ವೈಯಕ್ತಿಕ ವಿಚಾರಕ್ಕೆ ಹೋಗಿದ್ದು, ಆಗ ಪೊಲೀಸರು ಒಂದು ದಾಖಲಾತಿಗೆ ಸಹಿ ಮಾಡಲು ಕೋರಿದ್ದು, ನಾನು ಆ ಪ್ರಕಾರ ಸಹಿ ಮಾಡಿರುತ್ತೇನೆ. ಸಾಕ್ಷಿ ಅಮಾನತ್ತು ಪಂಚನಾಮೆಯನ್ನು ತಮ್ಮ ಸಹಿಯನ್ನು ಗುರುತಿಸಿದ್ದು, ಅಮಾನತ್ತು ಪಂಚನಾಮೆಯನ್ನು ನಿಪಿ7 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ7(ಎ) ಎಂದು ಗುರುತಿಸಲಾಗಿದೆ. ಪೊಲೀಸರು ಅಪಘಾತದಲ್ಲಿ ಯಾರೋ ಮೃತ ಪಟ್ಟಿರುವುದಾಗಿ

ತಿಳಿಸಿ ನನ್ನ ಸಹಿಯನ್ನು ಪಡೆದಿರುತ್ತಾರೆ. ನನ್ನ ಸಮಕ್ಷಮ ಯಾವುದೇ ಪಂಚನಾಮಯನ್ನು ಮಾಡಿ, ಯಾವುದೇ ವಾಹನವನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ.

ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಎ ಪಿ ಪಿರವರು ಅನುಮತಿ ಕೋರುತ್ತಿದ್ದು, ಸಾಕ್ಷಿಯ ಸಾಕ್ಷ್ಯವನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.

ಪಾಟೀ ಸವಾಲುಃ ಎ ಪಿ ಪಿ ರವರಿಂದಃ

3. ದಿಃ 21.11.2018 ರಂದು ಪೊಲೀಸರು ನನ್ನನ್ನು ಹಾಗೂ ಚಾಸಾ 11 ರವರನ್ನು ಪಂಚನಾಮೆಗೆ ಬರಲು ಕೋರಿದ್ದು, ಆ ಪ್ರಕಾರ ನಾವು ಒಪ್ಪಿಕೊಂಡು ಶ್ರೀರಂಗಪಟ್ಟಣ ಗ್ರಾಮಾಂತರ ಪೊಲೀಸ್ ಠಾಣೆಯ ಆವರಣದಲ್ಲಿ ಹಾಜರಿದ್ದು, ಚಾಸಾ 16 ರವರು ಹಾಜರುಪಡಿಸಿರುವ ಲಾರಿ ಸಂಖ್ಯೆಃ ಟಿಎನ್- 33- ಎಬಿ-4947 ಅನ್ನು ಪೊಲೀಸರು ನಿಪಿ 7 ರಂತೆ ಪಂಚನಾಮೆಯನ್ನು ಮಾಡಿ ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ 7 ಅನ್ನು ನಮಗೆ ಓದಿ ಹೇಳಿ ನನ್ನ, ಚಾಸಾ 11 ಮತ್ತು 16 ರವರ ಸಹಿಗಳನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು ಮಧ್ಯಾಹ್ನ 1.30 ರಿಂದ 2.15 ಗಂಟೆಯವರೆಗೂ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಚಾಸಾ 16 ರವರು ಹಾಜರುಪಡಿಸಿರುವ ಲಾರಿಯ ಲಾರಿ ಸಂಖ್ಯೆಃ ಟಿಎನ್-33-ಎಬಿ-4947 ಪೊಲೀಸರು ನಮ್ಮ ಸಮಕ್ಷಮ ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಲಾರಿಯು ಕಾಫಿ ಬಣ್ಣದ್ದಾಗಿದ್ದು, ಅಶೋಕ್ ಲೇ ಲ್ಯಾಂಡ್ ಲಾರಿಯಾಗಿದ್ದು, ಸದರಿ ಲಾರಿಯ ಮುಂಭಾಗದ ಬೋರ್ಡ್

ಮೇಲೆ Sri. Selvanayaka ಎಂದು ಇಂಗ್ಲೀಷ್ ನಲ್ಲಿ ಬರೆದಿದ್ದು, ಅದರ ಹಿಂದಿನ ಹಾಗೂ ಮುಂದಿನ ಪ್ಲೇಟ್ ಹಳದಿ ಬಣ್ಣದ್ದಾಗಿದ್ದು, ಅದರ ಮೇಲೆ ಟಿಎನ್ 33-ಎಬಿ-4947 ಎಂದು ಬರೆಯಲಾಗಿತ್ತು ಎಂದರೆ ಸರಿಯಲ್ಲ. ಆರೋಪಿಯ ಪರಿಚಯವಿದ್ದು ಆರೋಪಿತರಿಗೆ ಸಹಾಯ ಮಾಡಬೇಕೆಂಬ ದುರುದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>

ವಕೀಲರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆ ಇಲ್ಲ.

*ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.*

*ಓ ಹೇ ಕೆ ಸ ಇ ಒ*

*ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು*

*ಶ್ರೀರಂಗಪಟ್ಟಣ.*